ಕರ್ನಾಟಕ ಸರ್ಕಾರ

ಸಂಖ್ಯೆ: ಹೆಚ್‌ಡಿ 32 ಸಿಎನ್‌ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 05/10/2020.

:: ಸುತ್ತೋಲೆ ::

**ವಿಷಯ:-** ರಾಜ್ಯದ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳು ಸೇರಿದಂತೆ ಎಲ್ಲಾ ಚಿತ್ರಮಂದಿರಗಳ ಸಂಪೂರ್ಣ ಮಾಹಿತಿ, ನೈರ್ಮಲ್ಯತೆ ಇತ್ಯಾದಿಗಳ ಸಮಗ್ರ ಮಾಹಿತಿ ಕ್ರೂಢೀಕರಿಸುವ ಬಗ್ಗೆ.

**********

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಕಾಯ್ದೆ, 1964ರ ಸೆಕ್ಷನ್-14 ರ ಉದ್ಧೃತ ಭಾಗ ಈ ಕೆಳಕಂಡಂತಿದೆ:-

"Power of State Government to issue orders and directions of a general character in respect of matters relating to licences;- The State Government may, subject to the provisions of this Act and the rules made thereunder, issue to licensing authorities such orders and directions of a general character as it may consider necessary in respect of any matter relating to licences for the exhibition of cinematograph films, and every licensing authority shall give effect to such orders and directions."

ಮೇಲಿನ ಕಾಯ್ದೆಗನುಗುಣವಾಗಿ, ರಾಜ್ಯದ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳು ಸೇರಿದಂತೆ ಎಲ್ಲಾ ಚಿತ್ರಮಂದಿರಗಳ ಸ್ವಚ್ಛತೆ, ನೈರ್ಮಲ್ಯತೆಯನ್ನು ಉತ್ತಮ ಮಟ್ಟದಲ್ಲಿ ನಿರ್ವಹಿಸಿ, ಸರ್ಕಾರಕ್ಕೆ ತ್ರೈಮಾಸಿಕ ವರದಿ ಸಲ್ಲಿಸಲು ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿರುವ ಮಲ್ಟಿಪ್ಲೆಕ್ಸ್, ಖಾಯಂ, ಅರೆ ಖಾಯಂ, ತಾತ್ಕಾಲಿಕ, ವಿಡಿಯೋ ಮತ್ತು ಡ್ರೈವ್-ಇನ್ ಚಿತ್ರಮಂದಿರಗಳ ವಿವರ, ಆಸನ ಸಾಮರ್ಥ್ಯ, ಇತ್ಯಾದಿ ಸಂಪೂರ್ಣ ಮಾಹಿತಿಯನ್ನು ಸರ್ಕಾರಕ್ಕೆ ಆದ್ಯತೆಯ ಮೇಲೆ ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳನ್ನು ಅನೇಕ ಬಾರಿ ಕೋರಲಾಗಿರುತ್ತದೆ.

**ಈ ಬಗ್ಗೆ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಸಕಾಲದಲ್ಲಿ ಅಗತ್ಯ ಮಾಹಿತಿ ಮತ್ತು ಅನುಪಾಲನಾ ವರದಿಗಳು ಸ್ವೀಕೃತಗೊಳ್ಳದಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಕಾಯ್ದೆ, 1964ರ ಸೆಕ್ಷನ್-14ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಲಗತ್ತಿಸಿರುವ ಅನುಬಂಧದನ್ವಯ ತಕ್ಷಣವೇ ಜಿಲ್ಲಾ ವ್ಯಾಪ್ತಿಯ ಎಲ್ಲಾ ಚಿತ್ರಮಂದಿರಗಳ ಮಾಹಿತಿ ಹಾಗೂ ಕಾಲಕಾಲಕ್ಕೆ ಪರಿಷ್ಕೃತ ಅನುಪಾಲನಾ ವರದಿಯನ್ನು ಸಲ್ಲಿಸಲು ಜಿಲ್ಲಾ ದಂಡಾಧಿಕಾರಿಗಳಿಗೆ ಸೂಚಿಸಿದೆ.**

05/10/2020

**(ಎಸ್. ಸುರೇಶ್ ಬಾಬು)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ & ಸಿನಿಮಾ)

**ಇವರಿಗೆ :-**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು : ಇ-ಗೆಜೆಟ್ ಪ್ರಕಟಣೆಗಾಗಿ.

**ಪ್ರತಿ:**

1. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
2. ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರು / ಜಿಲ್ಲಾಧಿಕಾರಿಗಳು.
3. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

(34)

6/10/2020

ಒಳಾಡಳಿತ ಇಲಾಖೆ
ಸ್ವೀಕೃತಿ ಮತ್ತು ರವಾನೆ ಶಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ

# ಅನುಬಂಧ

| ಕ್ರಮ ಸಂಖ್ಯೆ | ಮಲ್ಟಿಪ್ಲೆಕ್ಸ್/ ಖಾಯಂ/ ಅರೆಖಾಯಂ/ ತಾತ್ಕಾಲಿಕ/ ವಿಡಿಯೋ ಹಾಗೂ ಡ್ರೈವ್ -ಇನ್ ಚಿತ್ರಮಂದಿರಗಳ ಹೆಸರು ಮತ್ತು ವಿಳಾಸ. | ಪರವಾನಗಿ ನೀಡಿದ ದಿನಾಂಕ | ಆಸನಗಳ ಸಾಮರ್ಥ್ಯ | ವಿಧಿಸಲಾದ ಪರವಾನಗಿ ಶುಲ್ಕ [ಯಾವ ನಿಯಮದನ್ವಯ] Karnataka Cinema (Regulation) Rules 1971 or 2014 | | ಶುಲ್ಕವನ್ನು 05 ವರ್ಷಗಳ ಅವಧಿಗೆ ಪರಿಷ್ಕರಿಸಿದಲ್ಲಿ ಶುಲ್ಕದ ವಿವರ | ಈ ಚಿತ್ರಮಂದಿರಗಳಲ್ಲಿ ಚಿತ್ರಪ್ರದರ್ಶನಕ್ಕೆ ವಿಧಿಸಲಾಗುತ್ತಿರುವ ಶುಲ್ಕ (ರೂ.ಗಳಲ್ಲಿ) | ಚಿತ್ರಮಂದಿರದ ಸ್ವಚ್ಛತೆ / ನೈರ್ಮಲ್ಯತೆ / ಮೂಲಭೂತ ಸೌಕರ್ಯಗಳ ಮೌಲ್ಯಾಂಕನ (ಶೇಕಡ %) | |
|---|---|---|---|---|---|---|---|---|---|
| | | | | **Renewal fees** | **Stamp Duty fees** | | | ಸ್ವಚ್ಛತೆ | ಮೂಲಭೂತ ಸೌಕರ್ಯ |
| **1** | **2** | **3** | **4** | **5** | **6** | **7** | **8** | **9** | **10** |